# ವಿಶ್ವವಿದ್ಯಾನಿಲಯ ಕಲಾ ಕಾಲೇಜು

(ತುಮಕೂರು ವಿಶ್ವವಿದ್ಯಾನಿಲಯ ಘಟಕ ಕಾಲೇಜು)

ಬಿ.ಹೆಚ್.ರಸ್ತೆ, ತುಮಕೂರು.

ಸಂ.:ವಿವಿಕಕಾತು:2025-26 ದಿನಾಂಕ: 19.05.2025

## "ಸುತ್ತೋಲೆ"

ವಿಶ್ವವಿದ್ಯಾನಿಲಯ ಕಲಾ ಕಾಲೇಜಿನಲ್ಲಿ 2025-26 ನೇ ಶೈಕ್ಷಣಿಕ ಸಾಲಿನ ಪ್ರಥಮ ವರ್ಷದ ಸ್ನಾತಕ BA, BSW, B.COM, ಮತ್ತು BBA ಪದವಿ ತರಗತಿಗಳಿಗೆ ಪ್ರವೇಶ ಪಡೆಯಲು ಇಚ್ಛಿಸುವ ವಿದ್ಯಾರ್ಥಿಗಳು ಕಡ್ಡಾಯವಾಗಿ https://onlinetut.in/ucatut/ ತಂತ್ರಾಂಶದ ಮೂಲಕ ಅರ್ಜಿಗಳನ್ನು ಸಲ್ಲಿಸಿ ಕೆಳಕಂಡ ದಿನಾಂಕಗಳಂದು ಪ್ರವೇಶಾತಿ ಕೌನ್ಸಿಲಿಂಗ್‌ಗೆ ಹಾಜರಾಗತಕ್ಕದ್ದು. **ಕೌನ್ಸಿಲಿಂಗ್‌ಗೆ ಗೈರು ಹಾಜರಾದ ವಿದ್ಯಾರ್ಥಿಗಳ ಸೀಟುಗಳನ್ನು ಯಾವುದೇ ಕಾರಣಕ್ಕೂ ಮೀಸಲಿರಿಸಲಾಗುವುದಿಲ್ಲ ಹಾಗೂ ನಂತರದ ಮೆರಿಟ್‌ನಲ್ಲಿರುವ ವಿದ್ಯಾರ್ಥಿಗಳಿಗೆ ಸೀಟುಗಳನ್ನು ನೀಡಲಾಗುವುದು.**

| ಕ್ರ.ಸಂ. | ಕೋರ್ಸು | ಕೌನ್ಸಲಿಂಗ್ ದಿನಾಂಕ | ಸಮಯ | ಶುಲ್ಕ |
|---|---|---|---|---|
| 01 | ಬಿ.ಕಾಂ. (ವಿಶ್ವವಿದ್ಯಾನಿಲಯ ಸೀಟುಗಳು) | 04.06.2025 ಬುಧವಾರ | ಬೆಳಗ್ಗೆ 10 ಗಂಟೆಯಿಂದ 01 ಗಂಟೆಯ ವರೆಗೆ | ರೂ.14800-00 |
| 02 | ಬಿ.ಕಾಂ. (ಪಾವತಿ ಸೀಟುಗಳು) | 04.06.2025 ಬುಧವಾರ | ಮಧ್ಯಾಹ್ನ 02 ಗಂಟೆಯಿಂದ 05 ಗಂಟೆಯವರೆಗೆ | ರೂ.24650-00 |
| 03 | ಬಿ.ಬಿ.ಎ. (ವಿಶ್ವವಿದ್ಯಾನಿಲಯ ಸೀಟುಗಳು) | 05.06.2025 ಗುರುವಾರ | ಬೆಳಗ್ಗೆ 10 ಗಂಟೆಯಿಂದ 01 ಗಂಟೆಯ ವರೆಗೆ | ರೂ.14800-00 |
| 04 | ಬಿ.ಎ- HEP (ವಿಶ್ವವಿದ್ಯಾನಿಲಯ ಸೀಟುಗಳು) | 06.06.2025 ಶುಕ್ರವಾರ | ಬೆಳಗ್ಗೆ 10 ಗಂಟೆಯಿಂದ 01 ಗಂಟೆಯ ವರೆಗೆ | ರೂ. 5750-00 |
| 05 | ಬಿ.ಎ- HES, HEK (ವಿಶ್ವವಿದ್ಯಾನಿಲಯ ಸೀಟುಗಳು) | 06.06.2025 ಶುಕ್ರವಾರ | ಮಧ್ಯಾಹ್ನ 02 ಗಂಟೆಯಿಂದ 05 ಗಂಟೆಯವರೆಗೆ | ರೂ. 5750-00 |
| 06 | ಬಿ.ಎ- EngSP, JKP (ವಿಶ್ವವಿದ್ಯಾನಿಲಯ ಸೀಟುಗಳು) | 09.06.2025 ಸೋಮವಾರ | ಬೆಳಗ್ಗೆ 10 ಗಂಟೆಯಿಂದ 01 ಗಂಟೆಯ ವರೆಗೆ | ರೂ. 5750-00 |
| 07 | ಬಿ.ಎ- HJEng, LJpsy (ವಿಶ್ವವಿದ್ಯಾನಿಲಯ ಸೀಟುಗಳು) | 09.06.2025 ಸೋಮವಾರ | ಮಧ್ಯಾಹ್ನ 02 ಗಂಟೆಯಿಂದ 05 ಗಂಟೆಯವರೆಗೆ | ರೂ. 5750-00 |
| 08 | ಬಿ.ಎಸ್.ಡಬ್ಲ್ಯೂ (ವಿಶ್ವವಿದ್ಯಾನಿಲಯ ಸೀಟುಗಳು) | 09.06.2025 ಸೋಮವಾರ | ಬೆಳಗ್ಗೆ 10 ಗಂಟೆಯಿಂದ 01 ಗಂಟೆಯ ವರೆಗೆ | ರೂ. 5750-00 |

ಪ್ರಾಂಶುಪಾಲರು

ಪ್ರಾಂಶುಪಾಲರ

# ವಿಶ್ವವಿದ್ಯಾನಿಲಯ ಕಲಾ ಕಾಲೇಜು

(ತುಮಕೂರು ವಿಶ್ವವಿದ್ಯಾನಿಲಯ ಘಟಕ ಕಾಲೇಜು)

ಬಿ.ಹೆಚ್.ರಸ್ತೆ, ತುಮಕೂರು.

ಸಂ.:ವಿವಿಕಕಾತು:2025-26

ದಿನಾಂಕ: 19.05.2025

## : ಪ್ರವೇಶಾತಿ ಸೂಚನೆ:

ವಿಶ್ವವಿದ್ಯಾನಿಲಯದ ಕಲಾ ಕಾಲೇಜಿನ https://onlinetut.in/ucatut/ ತಂತ್ರಾಂಶದ ಮೂಲಕ ಆನ್‌ಲೈನ್ ಅರ್ಜಿ ಸಲ್ಲಿಸಿದ ನಂತರ ಅದರ ಒಂದು ಹಾರ್ಡ್‌ಕಾಪಿಯನ್ನು ಕೌನ್ಸಿಲಿಂಗ್ ಸಂದರ್ಭದಲ್ಲಿ ಈ ಕೆಳಕಂಡ ದಾಖಲೆಗಳ ಮೂಲ ಪ್ರತಿಗಳೊಂದಿಗೆ ಒಂದು ಸೆಟ್ ಜೆರಾಕ್ಸ್ ಪ್ರತಿಗಳನ್ನು ದೃಢೀಕರಿಸಿ ಹಾಜರು ಪಡಿಸುವುದು.

1. ಪ್ರಾಂಶುಪಾಲರು ದೃಢೀಕರಿಸಿರುವ ಅರ್ಹತಾ ಪರೀಕ್ಷೆಯ (ಪಿ.ಯು.ಸಿ) ಅಂಕಪಟ್ಟಿ / ತತ್ಸಮಾನ ಪರೀಕ್ಷೆಯ ಅಂಕಪಟ್ಟಿ.
2. ಹಿಂದೆ ವ್ಯಾಸಂಗ ಮಾಡಿದ ಕಾಲೇಜು ನೀಡಿದ ನಡತೆ ಪ್ರಮಾಣ ಪತ್ರ / ವರ್ಗಾವಣೆ ಪತ್ರ (ಟಿ.ಸಿ) (ನೀಡಿದ್ದ ಪಕ್ಷದಲ್ಲಿ)
3. ಜನ್ಮ ದಿನಾಂಕ ದೃಢೀಕರಣಕ್ಕಾಗಿ ಎಸ್.ಎಸ್.ಎಲ್.ಸಿ ಅಂಕಪಟ್ಟಿಯ ಪ್ರತಿ.
4. ಚಾಲ್ತಿಯಲ್ಲಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರ (ಅನ್ವಯವಾಗುವವರಿಗೆ).
5. ಹೈದಾರಾಬಾದ್ ಕರ್ನಾಟಕ 371(ಜೆ) ಮೀಸಲಾತಿ ಅಡಿಯಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ ಪ್ರಮಾಣ ಪತ್ರವನ್ನು ಲಗತ್ತಿಸಬೇಕು.
6. ವಿಕಲಚೇತನ ಮಿಸಲಾತಿ ಅಡಿಯಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ ಪ್ರಮಾಣ ಪತ್ರವನ್ನು ಲಗತ್ತಿಸಬೇಕು.
7. ಪಾಸ್ ಪೋರ್ಟ್ ಅಳತೆಯ ಇತ್ತೀಚಿನ 3 ಭಾವಚಿತ್ರಗಳು.
8. ಆಧಾರ್ ಗುರುತಿನ ಚೀಟಿ ಹಾಗೂ ಆಧಾರ್ ಕಾರ್ಡಿಗೆ ಲಿಂಕ್‌ಗೊಂಡಿರುವ ಮೊಬೈಲ್ ನಂಬರ್
9. ವಿದ್ಯಾರ್ಥಿಯ ಹೆಸರಿನಲ್ಲಿರುವ ಬ್ಯಾಂಕ್ ಪಾಸ್ ಬುಕ್.
10. ಖಾಯಂ ಮೊಬೈಲ್ ಸಂಖ್ಯೆ ಮತ್ತು ಇ-ಮೇಲ್ ಐ.ಡಿ. (ಬದಲಾಯಿಸಕ್ಕದ್ದಲ್ಲ)
11. ಪ್ರವೇಶ ಸಂದರ್ಭದಲ್ಲಿ ವಿದ್ಯಾರ್ಥಿಯ ಜೊತೆ ತಂದೆ/ಪೋಷಕರು ಖುದ್ದಾಗಿ ಹಾಜರಾಗಿ ಅಗತ್ಯವಾದ ದಾಖಲೆಗಳಿಗೆ ತಮ್ಮ ಒಪ್ಪಿಗೆಯನ್ನು ಸೂಚಿಸಿ ಸಹಿಯನ್ನು ಮಾಡುವುದು ಕಡ್ಡಾಯವಾಗಿರುತ್ತದೆ.
12. ಪ್ರವೇಶ ಶುಲ್ಕದ ವಿವರಗಳನ್ನು ಕಾಲೇಜಿನ ಸೂಚನಾ ಫಲಕದಲ್ಲಿ ನೋಡಬಹುದಾಗಿದೆ.
13. ವಿದ್ಯಾರ್ಥಿಗಳು ತಪ್ಪು ಮಾಹಿತಿ ನೀಡಿದಲ್ಲಿ ನಿಮ್ಮ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ. ಒಂದು ವೇಳೆ ಯಾವುದೇ ಹಂತದಲ್ಲಿ ಕಂಡುಬಂದಲ್ಲಿ ಮುನ್ಸೂಚನೆ ಇಲ್ಲದೆ ಪ್ರವೇಶವನ್ನು ರದ್ದುಪಡಿಸಿ, ನಿಮ್ಮ ವಿರುದ್ಧ ಕ್ರಮ ಜರುಗಿಸಲಾಗುವುದು.

**ವಿಶೇಷ ಸೂಚನೆ:**

- ಪ್ರವೇಶ ಪಡೆಯಲು ಇಚ್ಛಿಸುವ ವಿದ್ಯಾರ್ಥಿಗಳು https://onlinetut.in/ucatut/ ತಂತ್ರಾಂಶದ ಮೂಲಕ ಕಡ್ಡಾಯವಾಗಿ ಆನ್‌ಲೈನ್ ಅರ್ಜಿಯನ್ನು ಸಲ್ಲಿಸಿರತಕ್ಕದ್ದು.
- ಸದರಿ ಪ್ರವೇಶವು ತಾತ್ಕಾಲಿಕ ಮತ್ತು ವಿಶ್ವವಿದ್ಯಾನಿಲಯದ ಅನುಮೋದನೆಗೆ ಒಳಪಟ್ಟಿರುತ್ತದೆ. ಯಾವುದೇ ಹಂತದಲ್ಲಿ ಪ್ರವೇಶಾತಿಯನ್ನು ರದ್ದುಗೊಳಿಸುವ ಅಧಿಕಾರವನ್ನು ವಿಶ್ವವಿದ್ಯಾನಿಲಯ ಕಲಾ ಕಾಲೇಜು ಹೊಂದಿರುತ್ತದೆ
- ಪ್ರವೇಶ ಪಡೆದ ವಿದ್ಯಾರ್ಥಿಗಳು ಪ್ರವೇಶವನ್ನು ರದ್ದುಪಡಿಸಿಕೊಳ್ಳಲು ಇಚ್ಛಿಸಿದಲ್ಲಿ, ಯಾವುದೇ ಕಾರಣಕ್ಕೂ ಪ್ರವೇಶ ಶುಲ್ಕವನ್ನು ಹಿಂಪಾವತಿಸುವುದಿಲ್ಲ.
- ಕೌನ್ಸಿಲಿಂಗ್‌ನಲ್ಲಿ ಸೀಟು ಪಡೆದ ವಿದ್ಯಾರ್ಥಿಗಳು ಪ್ರವೇಶ ಶುಲ್ಕವನ್ನು www.ucatut.ac.in ವೆಬ್‌ಸೈಟ್‌ನ ಮುಖಾಂತರ SBI COLLECT ಆನ್‌ಲೈನ್‌ನಲ್ಲಿ ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಕಲಾ ಕಾಲೇಜು ಇವರ ಖಾತೆಗೆ ಕೌನ್ಸಿಲಿಂಗ್ ದಿನದಂದೇ ಪಾವತಿಸುವುದು. ಹಾಗೂ ನಗದು ರೂಪದಲ್ಲಿ ಸ್ವೀಕರಿಸುವುದಿಲ್ಲ

ಪ್ರಾಂಶುಪಾಲರು

# ವಿಶ್ವವಿದ್ಯಾನಿಲಯ ಕಲಾ ಕಾಲೇಜು

(ತುಮಕೂರು ವಿಶ್ವವಿದ್ಯಾನಿಲಯ ಘಟಕ ಕಾಲೇಜು)

ಬಿ.ಹೆಚ್.ರಸ್ತೆ, ತುಮಕೂರು.

ಸಂ.:ವಿವಿಕಕಾತು:2025-26

ದಿನಾಂಕ: 19.05.2025

## ವಿದ್ಯಾರ್ಥಿಗಳಿಗೆ ಸೂಚನೆ

ಈ ಮೂಲಕ 2025-26 ನೇ ಶೈಕ್ಷಣಿಕ ಸಾಲಿಗೆ ಪ್ರಥಮ ಬಿ.ಎ, ಬಿ.ಎಸ್.ಡಬ್ಲ್ಯೂ, ಬಿ.ಕಾಂ, ಮತ್ತು ಬಿ.ಬಿ.ಎ ಪದವಿ ತರಗತಿಗಳಿಗೆ ಪ್ರವೇಶ ಕೋರಿ https://onlinetut.in/ucatut/ ಆನ್‌ಲೈನ್ (Online) ನಲ್ಲಿ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು ಈ ಕೆಳಗಿನ ದಾಖಲೆಗಳನ್ನು ಸಿದ್ಧಪಡಿಸಿಕೊಂಡು ಅರ್ಜಿ ಸಲ್ಲಿಸುವುದು.

1. ವಿದ್ಯಾರ್ಥಿಯ ಹೆಸರಿನ ಆಧಾರ್ ಕಾರ್ಡ್ – (ವಿ.ಸೂ: ಆಧಾರ್ ಕಾರ್ಡ್‌ನಲ್ಲಿರುವಂತೆ ಹೆಸರು ನಮೂದಾಗುತ್ತದೆ)
2. ವಿದ್ಯಾರ್ಥಿಯ ಇ-ಮೇಲ್ ಐ.ಡಿ. (ಬದಲಾಯಿಸತಕ್ಕದ್ದಲ್ಲ)
3. ವಿದ್ಯಾರ್ಥಿಯ ಆಧಾರ್ ನಂಬರ್.
4. ಆಧಾರ್ ಲಿಂಕ್ ಆಗಿರುವ ವಿದ್ಯಾರ್ಥಿಯ ಖಾಯಂ ಮೊಬೈಲ್ ಸಂಖ್ಯೆ. (ಬದಲಾಯಿಸತಕ್ಕದ್ದಲ್ಲ)
5. ಪೋಷಕರ ಖಾಯಂ ಮೊಬೈಲ್ ಸಂಖ್ಯೆ.
6. ವಿದ್ಯಾರ್ಥಿಯ ಇತ್ತೀಚಿನ ಮೂರು ಪಾಸ್‌ಪೋರ್ಟ್ ಸೈಜ್ ಫೋಟೋಗಳು.
7. ಪಿ.ಯು.ಸಿ ಅಂಕಪಟ್ಟಿ/ತತ್ಸಮಾನ ಪರೀಕ್ಷೆಯ ಅಂಕಪಟ್ಟಿ. (ಅಧ್ಯಯನ ಮಾಡಿದ ಕಾಲೇಜಿನ ಪ್ರಾಂಶುಪಾಲರು ದೃಢೀಕರಿಸಿರಬೇಕು)
8. ಪಿ.ಯು.ಸಿ ಅಧ್ಯಯನ ಮಾಡಿದ ಕಾಲೇಜು ನೀಡಿದ ನಡತೆ ಪ್ರಮಾಣ ಪತ್ರ / ವರ್ಗಾವಣೆ ಪತ್ರ (ಟಿ.ಸಿ) (ನೀಡಿದ್ದ ಪಕ್ಷದಲ್ಲಿ)
9. ಎಸ್.ಎಸ್.ಎಲ್.ಸಿ ಅಂಕಪಟ್ಟಿಯ ಪ್ರತಿ. (ಜನ್ಮ ದಿನಾಂಕ ದೃಢೀಕರಣಕ್ಕಾಗಿ)
10. ಚಾಲ್ತಿಯಲ್ಲಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರ (ಅನ್ವಯವಾಗುವವರಿಗೆ).
11. ಹೈದರಾಬಾದ್ ಕರ್ನಾಟಕ 371(ಜೆ) ಮೀಸಲಾತಿ ಅಡಿಯಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ ಪತ್ರ.
12. ವಿಕಲಚೇತನ ಮೀಸಲಾತಿ ಅಡಿಯಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ ಪ್ರಮಾಣ ಪತ್ರ.
13. ವಿದ್ಯಾರ್ಥಿಯ ಹೆಸರಿನಲ್ಲಿರುವ ಬ್ಯಾಂಕ್ ಪಾಸ್ ಬುಕ್.
14. ವಿದ್ಯಾರ್ಥಿಗಳು ತಪ್ಪು ಮಾಹಿತಿ ನೀಡಿದಲ್ಲಿ ನಿಮ್ಮ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ. ಒಂದು ವೇಳೆ ಯಾವುದೇ ಹಂತದಲ್ಲಿ ಕಂಡುಬಂದಲ್ಲಿ ಮುನ್ಸೂಚನೆ ಇಲ್ಲದೆ ಪ್ರವೇಶವನ್ನು ರದ್ದುಪಡಿಸಿ, ನಿಮ್ಮ ವಿರುದ್ಧ ಪ್ರಕರಣ ಕ್ರಮ ಜರುಗಿಸಲಾಗುವುದು.

ಪ್ರಾಂಶುಪಾಲರು

ಪ್ರಾಂಶುಪಾಲರು

ವಿಶ್ವವಿದ್ಯಾನಿಲಯ ಕಲಾ ಕಾಲೇಜು

ತುಮಕೂರು-572 103

# ವಿಶ್ವವಿದ್ಯಾನಿಲಯ ಕಲಾ ಕಾಲೇಜು

(ತುಮಕೂರು ವಿಶ್ವವಿದ್ಯಾನಿಲಯ ಘಟಕ ಕಾಲೇಜು)

ಬಿ.ಹೆಚ್.ರಸ್ತೆ, ತುಮಕೂರು.

ಸಂ.:ವಿವಿಕಕಾತು:2025-26 ದಿನಾಂಕ: 19.05.2025

## ಅಧಿಸೂಚನೆ

2025-26ನೇ ಶೈಕ್ಷಣಿಕ ಸಾಲಿನ ಪ್ರವೇಶ ಸಮಿತಿಯನ್ನು ಪ್ರಾಂಶುಪಾಲರ ಅಧ್ಯಕ್ಷತೆಯಲ್ಲಿ ಕೆಳಗಿನಂತೆ ರಚಿಸಲಾಗಿದೆ. ಅದರಂತೆ ಪ್ರವೇಶ ಸಮಿತಿಯು ಪ್ರವೇಶ ಪ್ರಕ್ರಿಯೆಯನ್ನು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಯಾವುದೇ ಲೋಪ ದೋಷಗಳು ಉಂಟಾಗದಂತೆ ಪ್ರವೇಶಮಿತಿಗೆ ಒಳಪಟ್ಟು ನಿಯಮಾನುಸಾರ ಯಶಸ್ವಿಯಾಗಿ ನಡೆಸಿಕೊಂಡು ಹೋಗಲು ಈ ಮೂಲಕ ತಿಳಿಸಲಾಗಿದೆ. ಬಿ.ಎ / ಬಿಎಸ್‌ಡಬ್ಲ್ಯೂ / ಬಿಬಿಎ/ ಬಿಕಾಂ ವಿದ್ಯಾರ್ಥಿಗಳಿಗೆ ಅರ್ಹತೆ/ಮೀಸಲಾತಿ ನಿಯಮಾನುಸಾರ ಕೌನ್ಸಿಲಿಂಗ್ ಮೂಲಕ ಪ್ರವೇಶ ಮಾಡಿಕೊಳ್ಳಲಾಗುವುದು.

| ಕ್ರ. ಸಂ. | ಕೋರ್ಸು | ಸಮಿತಿಯ ಅಧ್ಯಕ್ಷರು | ಸದಸ್ಯರುಗಳು |
|---|---|---|---|
| 01 | B.Com | ಪ್ರಾಂಶುಪಾಲರು ಮತ್ತು ಬಿ.ಕಾಂ. ವಿಭಾಗದ ಮುಖ್ಯಸ್ಥರು | ಬಿ.ಕಾಂ. ವಿಭಾಗದ ಎಲ್ಲಾ ಖಾಯಂ ಅಧ್ಯಾಪಕರು |
| 02 | BBA | ಪ್ರಾಂಶುಪಾಲರು ಮತ್ತು ಬಿ.ಬಿ.ಎ. ವಿಭಾಗದ ಮುಖ್ಯಸ್ಥರು | ಬಿ.ಬಿ.ಎ. ವಿಭಾಗದ ಎಲ್ಲಾ ಅಧ್ಯಾಪಕರು |
| 03 | BSW | ಪ್ರಾಂಶುಪಾಲರು ಮತ್ತು ಬಿ.ಎಸ್.ಡಬ್ಲ್ಯೂ ವಿಭಾಗದ ಮುಖ್ಯಸ್ಥರು | ಬಿ.ಎಸ್.ಡಬ್ಲ್ಯೂ. ವಿಭಾಗದ ಎಲ್ಲಾ ಅಧ್ಯಾಪಕರು |
| 04 | BA | | |
| I | HEP | ಇತಿಹಾಸ, ರಾಜ್ಯಶಾಸ್ತ್ರ ಮತ್ತು ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರು | ಇತಿಹಾಸ ಮತ್ತು ರಾಜ್ಯಶಾಸ್ತ್ರ ವಿಭಾಗದ ಎಲ್ಲಾ ಅಧ್ಯಾಪಕರು |
| II | HES | ಅರ್ಥಶಾಸ್ತ್ರ, ಸಮಾಜಶಾಸ್ತ್ರ ಮತ್ತು ಇತಿಹಾಸ ವಿಭಾಗದ ಮುಖ್ಯಸ್ಥರು | ಅರ್ಥಶಾಸ್ತ್ರ ಮತ್ತು ಸಮಾಜಶಾಸ್ತ್ರ ವಿಭಾಗದ ಎಲ್ಲಾ ಅಧ್ಯಾಪಕರು |
| III | HEK | ಅರ್ಥಶಾಸ್ತ್ರ, ಕನ್ನಡ ಮತ್ತು ಇತಿಹಾಸ ವಿಭಾಗದ ಮುಖ್ಯಸ್ಥರು | ಅರ್ಥಶಾಸ್ತ್ರ ಮತ್ತು ಕನ್ನಡ ವಿಭಾಗದ ಎಲ್ಲಾ ಅಧ್ಯಾಪಕರು |
| IV | JKP | ರಾಜ್ಯಶಾಸ್ತ್ರ, ಪತ್ರಿಕೋದ್ಯಮ ಮತ್ತು ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರು | ರಾಜ್ಯಶಾಸ್ತ್ರ ಮತ್ತು ಪತ್ರಿಕೋದ್ಯಮ ವಿಭಾಗದ ಎಲ್ಲಾ ಅಧ್ಯಾಪಕರು |
| V | HJEng | ಇತಿಹಾಸ, ಪತ್ರಿಕೋದ್ಯಮ ಮತ್ತು ಇಂಗ್ಲೀಷ್ ವಿಭಾಗದ ಮುಖ್ಯಸ್ಥರು | ಇತಿಹಾಸ ಮತ್ತು ಪತ್ರಿಕೋದ್ಯಮ ವಿಭಾಗದ ಎಲ್ಲಾ ಅಧ್ಯಾಪಕರು |
| VI | EngSP | ಇಂಗ್ಲೀಷ್ ಸಮಾಜಶಾಸ್ತ್ರ ಮತ್ತು ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರು | ಇಂಗ್ಲೀಷ್ ಮತ್ತು ಸಮಾಜಶಾಸ್ತ್ರ ವಿಭಾಗದ ಎಲ್ಲಾ ಅಧ್ಯಾಪಕರು |
| VII | LJPsy | ಪತ್ರಿಕೋದ್ಯಮ, ಗ್ರಂಥಾಲಯ & ಮಾಹಿತಿ ವಿಜ್ಞಾನ ಹಾಗೂ ಮನೋವಿಜ್ಞಾನ ವಿಭಾಗದ ಮುಖ್ಯಸ್ಥರು | ಗ್ರಂಥಾಲಯ & ಮಾಹಿತಿ ವಿಜ್ಞಾನ ಹಾಗೂ ಮನೋವಿಜ್ಞಾನ ವಿಭಾಗದ ಎಲ್ಲಾ ಅಧ್ಯಾಪಕರು |

ಪ್ರಾಂಶುಪಾಲರು

ಪ್ರಾಂಶುಪಾಲರು
ವಿಶ್ವವಿದ್ಯಾನಿಲಯ ಕಲಾ ಕಾಲೇಜು
ತುಮಕೂರು-572 103